### ಕೇಂದ್ರ ಸಚಿವ ಗೋಯಲ್ ಹೇಳಿಕೆ । ಜಾಗತಿಕ ಮಟ್ಟದ ಸೇವಾ ಕ್ಷೇತ್ರ ಪ್ರದರ್ಶನ ಉದ್ಘಾಟನೆ

# ಸೇವಾ ಕ್ಷೇತ್ರದಿಂದ ಹೆಚ್ಚಿನ ಕೊಡುಗೆ ನಿರೀಕ್ಷೆ

**ವಿಕ ಸುದ್ದಿಲೋಕ** ಬೆಂಗಳೂರು

ಮುಂದಿನ ಐದು ವರ್ಷಗಳಲ್ಲಿ ದೇಶದ ಆರ್ಥಿಕತೆಗೆ ಸೇವಾ ಕ್ಷೇತ್ರದಿಂದ ಮೂರು ಟ್ರಿಲಿಯನ್ ಡಾಲರ್ ಕೊಡುಗೆಯನ್ನು ನಿರೀಕ್ಷಿಸಲಾಗಿದೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ತಿಳಿಸಿದರು.

ನಗರದ ಬೆಂಗಳೂರು ಪ್ಯಾಲೇಸ್‌ನಲ್ಲಿ ಭಾರತೀಯ ಕೈಗಾರಿಕೆ ಒಕ್ಕೂಟ(ಸಿಐಐ) ಹಾಗೂ ಕೇಂದ್ರ ವಾಣಿಜ್ಯ ಸಚಿವಾಲಯ ಜಂಟಿಯಾಗಿ ಆಯೋಜಿಸಿದ್ದ ಜಾಗತಿಕ ಮಟ್ಟದ ಸೇವಾ ಕ್ಷೇತ್ರದ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಂಗಳವಾರ ಮಾತನಾಡಿದರು.

''ದೇಶದ ಆರ್ಥಿಕತೆಗೆ ಉತ್ಪಾದನಾ ವಲಯ ಹಾಗೂ ಸೇವಾ ಕ್ಷೇತ್ರವು ಪ್ರಗತಿಯ ಎಂಜಿನ್ ಆಗಿವೆ. ಈ ಎರಡೂ ಕ್ಷೇತ್ರಗಳು ಪರಸ್ಪರ ಅವಲಂಬಿಸಿದ್ದು, ಒಟ್ಟಾಗಿ ಕಾರ್ಯ ನಿರ್ವಹಿಸಿದಲ್ಲಿ ಹೆಚ್ಚಿನ ಸಾಧನೆ ಮಾಡಬಹುದು. ಜತೆಗೆ ವಿಪುಲ ಉದ್ಯೋಗಾವಕಾಶವಿದ್ದು, ದೇಶದ ಯುವಜನರಿಗೆ ಉತ್ತಮ ಭವಿಷ್ಯವಿದೆ,'' ಎಂದರು.

**'ವೆಲ್‌ನೆಸ್ ಸಿಟಿ' ನಿರ್ಮಾಣಕ್ಕೆ ಚಿಂತನೆ**

ಕೈಗಾರಿಕೆ ಸಚಿವ ಜಗದೀಶ್ ಶೆಟ್ಟರ್ ಮಾತನಾಡಿ ''ಕರ್ನಾಟಕ ಸೇವಾ ಕ್ಷೇತ್ರದಲ್ಲಿ ಇತರೆ ರಾಜ್ಯಗಳಿಗಿಂತ ಮುನ್ನಡೆ ಸಾಧಿಸಿದೆ. ಒಂಬತ್ತು ಜಿಲ್ಲೆಗಳಲ್ಲಿ ಉತ್ಪಾದನಾ ಕ್ಲಸ್ಟರ್‌ಗಳನ್ನು ಆರಂಭಿಸಲು ಅಂತಿಮ ಸಿದ್ಧತೆ ನಡೆಸಿದ್ದು, ಜಾಗತಿಕ ಮಟ್ಟದ 'ವೆಲ್‌ನೆಸ್ ಸಿಟಿ' ನಿರ್ಮಿಸಲು ಚಿಂತನೆ ನಡೆಸಲಾಗಿದೆ,'' ಎಂದರು.



ಬೆಂಗಳೂರು ಪ್ಯಾಲೇಸ್‌ನಲ್ಲಿ ಮಂಗಳವಾರ ಆರಂಭವಾದ ಜಾಗತಿಕ ಮಟ್ಟದ ಸೇವಾ ಕ್ಷೇತ್ರದ ಪ್ರದರ್ಶನಕ್ಕೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಚಾಲನೆ ನೀಡಿದರು.

> ಭಾರತಕ್ಕೆ ಸೇವಾ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಸಾಕಷ್ಟು ಅವಕಾಶ ಇದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಲು ಸರಕಾರ ಹಾಗೂ ಉದ್ಯಮವು ಒಟ್ಟಾಗಿ ಕಾರ್ಯನಿರ್ವಹಿಸಬೇಕಿದೆ.
>
> • **ವಿಕ್ರಂ ಕಿರ್ಲೋಸ್ಕರ್**, ಸಿಐಐ ಉಪಾಧ್ಯಕ್ಷ ಹಾಗೂ ಉದ್ಯಮಿ

## ಶೇ.38ರಷ್ಟು ಪಾಲು

''ರಾಜ್ಯದ ಒಟ್ಟಾರೆ ವಹಿವಾಟಿನಲ್ಲಿ ಸೇವಾ ಕ್ಷೇತ್ರದ ಶೇ.38ರಷ್ಟು ಕೊಡುಗೆ ಇದೆ. ಜಿಎಸ್‌ಡಿಪಿಗೆ ಶೇ.70ರಷ್ಟು ಕಾಣಿಕೆ ನೀಡುತ್ತಿದೆ. ದೇಶದ ಮೆಷಿನ್ ಟೂಲ್ಸ್ ಉತ್ಪಾದನೆಯಲ್ಲಿ ಕರ್ನಾಟಕವು ಅರ್ಧದಷ್ಟು ಪಾಲು ಹೊಂದಿದ್ದು, ಐಟಿ ಒಂದರಿಂದಲೇ ವಾರ್ಷಿಕ 3 ಲಕ್ಷ ಕೋಟಿ ರೂ. ರಫ್ತು ನಡೆದಿದೆ. ಜತೆಗೆ 12 ಲಕ್ಷ ಮಂದಿಗೆ ಉದ್ಯೋಗ ಒದಗಿಸಿದ್ದು, ಬೆಂಗಳೂರು ಸೇವಾ ಕ್ಷೇತ್ರವು ವಿಶ್ವದ ಮುಂಚೂಣಿ ನಗರವಾಗಿ ಮಾರ್ಪಟ್ಟಿದೆ,'' ಎಂದು ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯ್ ಭಾಸ್ಕರ್ ಅಂಕಿ-ಅಂಶ ನೀಡಿದರು.

ಸಿಐಐ ಅಧ್ಯಕ್ಷ ಅಮಾನ್ ಚೌಧರಿ, ಉದ್ಯಮಿಗಳಾದ ಡಾ.ದೇವಿಶೆಟ್ಟಿ, ಇರ್ಫಾನ್ ರಜಾಕ್, ಐಎಎಸ್ ಅಧಿಕಾರಿ ಗೌರವ್ ಗುಪ್ತಾ ಮತ್ತಿತರರಿದ್ದರು.